# ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ರವರ ನ್ಯಾಯಾಲಯ, ಹಿರಿಯೂರು

## ಸಿ.ಸಿ ಸಂಖ್ಯೆಃ 715/2023

| | | | |
|---|---|---|---|
| ಸಾಕ್ಷಿದಾರರ ಹೆಸರು | - | ಮಹಲಿಂಗಪ್ಪ | ಸಿಡಬ್ಲ್ಯೂ-1 |
| ತಂದೆಯ/ಗಂಡನ ಹೆಸರು | - | ನಿಂಗಪ್ಪ | ಪಿಡಬ್ಲ್ಯೂ-1 |
| ವಯಸ್ಸು | - | ಸು.50 ವರ್ಷ | ಪ್ರ.ವ.ಬೋ ದಿನಾಂಕಃ24.10.2024 |
| ಉದ್ಯೋಗ | - | ವ್ಯವಸಾಯ | |
| ವಾಸ | - | ಶಿವಗಂಗಾ ಗ್ರಾಮ | |

**ಮುಖ್ಯ ವಿಚಾರಣೆಃ ಮಾನ್ಯ ಎಪಿಪಿಯವರಿಂದಃ-**

ಚಾಸಾ-2 ರಿಂದ 8 ರವರು ನನ್ನ ಸಂಬಂಧಿಕರು. ಆರೋಪಿತರೆಲ್ಲರೂ ನಮ್ಮ ಸಂಬಂಧಿಕರು.

ಸುಮಾರು 2 ವರ್ಷಗಳ ಹಿಂದೆ ರಾತ್ರಿ 8.20 ರ ಸಮಯದಲ್ಲಿ ನಾನು ಮತ್ತು ಚಾಸಾ-2 ರಿಂದ 4 ರವರು ನಮ್ಮ ಮನೆಯ ಹತ್ತಿರ ಇರುವಾಗ ಆರೋಪಿತರು ಅಕ್ರಮವಾಗಿ ಗುಂಪುಕಟ್ಟಿಕೊಂಡು ಕಲ್ಲು ಮತ್ತು ಹಾರೆಕೋಲನ್ನು ಹಿಡಿದುಕೊಂಡು ಬಂದು ನಮಗೆ ಸೂಳೇಮಕ್ಕಳಾ, ಬೋಳೀಮಕ್ಕಳಾ ಎಂದು ಅವಾಚ್ಯ ಶಬ್ದಗಳಿಂದ ಬೈದರು. 1 ನೇ ಆರೋಪಿ ನನಗೆ ಹಾರೆಕೋಲಿನಿಂದ ನನ್ನ ತಲೆಗೆ ಹೊಡೆದ. ಚಾಸಾ-2 ರವರಿಗೆ 3 ನೇ ಆರೋಪಿತನು ಸೀರೆ ಹಿಡಿದು ಎಳೆದಾಡಿ, ಕೈ ಕಾಲುಗಳಿಂದ ಹೊಡೆದನು. ಉಳಿದ ಎಲ್ಲಾ ಆರೋಪಿತರು ಕೈ ಕಾಲುಗಳಿಂದ ಮೈ ಕೈಗೆ ಹೊಡೆದು ಮೆತ್ತಗೆ ಮಾಡಿದರು. ಚಾಸಾ-5 ಮತ್ತು 6 ರವರು ಜಗಳವನ್ನು ಬಿಡಿಸಿದರು. ಆರೋಪಿತರು ನಿಮ್ಮನ್ನು ಇಷ್ಟಕ್ಕೆ ಬಿಡುವುದಿಲ್ಲ, ನಿಮ್ಮ ಪ್ರಾಣ ತೆಗೆಯುತ್ತೇವೆ ಎಂದು ಪ್ರಾಣ ಬೆದರಿಕೆ ಹಾಕಿದರು. ನಂತರ ಗಾಯಗೊಂಡ ನಾವೆಲ್ಲರೂ ಚಿತ್ರದುರ್ಗ ಜಿಲ್ಲಾ ಆಸ್ಪತ್ರೆಗೆ ಚಿಕಿತ್ಸೆಗೆ ಹೋದೆವು. ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಆರೋಪಿತರನ್ನು ನೋಡಿ ಗುರುತಿಸುತ್ತಾರೆ. (8 ನೇ ಆರೋಪಿ ನ್ಯಾಯಲಯದಲ್ಲಿ ಗೈರು ಹಾಜರಿದ್ದು, ಆರೋಪಿತನನ್ನು

ಗುರುತಿಸುವಿಕೆಯ ಬಗ್ಗೆ ಯಾವುದೇ ತಕರಾರು ಇರುವುದಿಲ್ಲ ಎಂದು ವಕೀಲರು ವಿನಾಯಿತಿ ಅರ್ಜಿ ಸಲ್ಲಿಸಿರುತ್ತಾರೆ). ನಂತರ ಈ ಬಗ್ಗೆ ಚಿತ್ರದುರ್ಗ ಜಿಲ್ಲಾ ಆಸ್ಪತ್ರೆಯಲ್ಲಿದ್ದಾಗ ಆರೋಪಿತರ ವಿರುದ್ಧ ದೂರು ನೀಡಿರುತ್ತೇನೆ. ಸಾಕ್ಷಿಯು ನೋಡಿ ಗುರುತಿಸಿದ ಸದರಿ ದೂರನ್ನು **ನಿಪಿ-1** ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು **ನಿಪಿ-1(ಎ)** ಎಂದು ಗುರುತಿಸಲಾಯಿತು. ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಹಾರೆಕೋಲನ್ನು ನೋಡಿ ಗುರುತಿಸುತ್ತಾರೆ.

(ಈ ಹಂತದಲ್ಲಿ ಮಾನ್ಯ ಎಪಿಪಿರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ-ಸವಾಲು ಮಾಡಲು ಅನುಮತಿ ಕೋರಿದ್ದಾರೆ. ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ-ಸವಾಲಿನಲ್ಲಿ ಕೇಳುವ ಪ್ರಶ್ನೆಗಳನ್ನು ಕೇಳಲು ಅನುಮತಿ ನೀಡಲಾಯಿತು).

**ಪಾಟೀ-ಸವಾಲುಃ ಮಾನ್ಯ ಎಪಿಪಿಯವರಿಂದಃ-**

1 ನೇ ಆರೋಪಿ ಗಲಾಟೆ ಬಿಡಿಸಲು ಬಂದ ಚಾಸಾ-2 ರವರ ಸೀರೆಯನ್ನು ಹಿಡಿದು ಎಳೆದಾಡಿ ಕೈ ಕಾಲುಗಳಿಂದ ಹೊಡೆದ ಎಂದರೆ ಸರಿ.

**ಪಾಟೀ-ಸವಾಲುಃ ಆರೋಪಿ ಪರ ಶ್ರೀ.ವೈ ಆರ್ ಕೆ ವಕೀಲರಿಂದಃ**

ಚಾಸಾ-2 ನನ್ನ ಸೊಸೆ. ಚಾಸಾ-3 ನನ್ನ ಅಕ್ಕ ಅವರು ನಾಗಪ್ಪನಹಟ್ಟಿ ಗ್ರಾಮದಲ್ಲಿ ವಾಸವಿದ್ದಾರೆ. ಚಾಸಾ-4 ನನ್ನ ತಮ್ಮ. ಚಾಸಾ-5 ನನ್ನ ಅಣ್ಣ. ಚಾಸಾ-6 ನನ್ನ ಅಣ್ಣನ ಮಗ. ಚಾಸಾ-7 ನನ್ನ ಹೆಂಡತಿಯ ಅಕ್ಕ. ಚಾಸಾ-8 ನನ್ನ ಸಂಬಂಧಿ. ಆರೋಪಿತರೆಲ್ಲರೂ ನನ್ನ ಸಂಬಂಧಿಕರು.

1 ನೇ ಆರೋಪಿಯ ಮನೆಯ ಪಶ್ಚಿಮ ದಿಕ್ಕಿಗೆ ಚಾಸಾ-2 ಮತ್ತು 3 ರವರ ಮನೆ ಇದೆ. ಅದರ ಪಕ್ಕದಲ್ಲಿ ನನ್ನ ಮನೆ ಇದೆ ಎಂದರೆ ಸರಿ. 1 ಆರೋಪಿಯ ಮನೆ ಮುಂದೆ ಸಾರ್ವಜನಿಕ ರಸ್ತೆ ಇದೆ ಎಂದರೆ ಸರಿ. 1 ಆರೋಪಿ ಮತ್ತು ಚಾಸಾ-2 ರವರ ಮನೆಯ ಮಧ್ಯೆ6-7 ಅಡಿ ಖಾಲಿ ಜಾಗ ಇದೆ ಎಂದರೆ ಸರಿ. ಈ ವಿಚಾರವಾಗಿ ಆರೋಪಿತರು ಹಾಗೂ ನಮ್ಮ ನಡುವೆ ಆಗಾಗ ಜಗಳ ನಡೆಯುತ್ತದೆ ಎಂದರೆ ಸರಿ. ಈ ವಿಚಾರವಾಗಿ ನಮ್ಮ ಮತ್ತು ಆರೋಪಿತರ ನಡುವೆ ವೈ ಮನಸ್ಸು ಇದೆ ಎಂದರೆ ಸರಿ. ಸದರಿ ಖಾಲಿ ಜಾಗ

ಸರ್ಕಾರಕ್ಕೆ ಸೇರಿದ್ದು ಎಂದರೆ ಸಾಕ್ಷಿಯು ನಮಗೆ ಸೇರಿದ್ದು ಎಂದು ನುಡಿಯುತ್ತಾರೆ. ಅದಕ್ಕೆ ಸಂಬಂಧಪಟ್ಟ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಸಿರುತ್ತೇನೆ. ನಾನು ಮತ್ತು ಚಾಸಾ-4 ರವರು ಬೇರೆ ಬೇರೆ ವಾಸವಾಗಿದ್ದೇವೆ ಎಂದರೆ ಸರಿ. ನನ್ನ ಹಾಗೂ 1 ನೇ ಆರೋಪಿ ನಡುವೆ ಇರುವ ಸಮಸ್ಯೆ ಅಲ್ಲ ಎಂದರೆ ಸರಿ. ಇದು 1 ನೇ ಆರೋಪಿ ಮತ್ತು ಚಾಸಾ-2 ರವರ ಮನೆ ಮಧ್ಯೆ ಇರುವ ಜಾಗದ ಸಮಸ್ಯೆ ಎಂದರೆ ಸರಿ. 1 ನೇ ಆರೋಪಿ ಮತ್ತು ಚಾಸಾ-2 ರವರ ಮನೆ ಮಧ್ಯೆ ಸುಮಾರು 15 ಅಡಿ ಅಗಲ ರಸ್ತೆ ಇದೆ ಎಂದರೆ ಸರಿ. ನನ್ನ ಮನೆ ಚಾಸಾ-2 ರವರ ಮನೆಯ ಪಶ್ಚಿಮ ದಿಕ್ಕಿಗೆ ಬರುತ್ತದೆ ಎಂದರೆ ಸರಿ. ನನ್ನ ಮನೆಯಲ್ಲಿ ಒಟ್ಟು 4 ಜನ ವಾಸವಿದ್ದೇವೆ. ಚಾಸಾ-2 ರವರ ಮನೆಯಲ್ಲಿ ಒಟ್ಟು 6 ಜನ ವಾಸವಿದ್ದಾರೆ. 1 ನೆ ಆರೋಪಿಯ ಮನೆಯಲ್ಲಿ ಒಟ್ಟು 3 ಜನ ವಾಸವಿದ್ದಾರೆ. ನಮ್ಮ ಮನೆ ಮುಂದಿನ ರಸ್ತೆ ಪೂರ್ವದಿಂದ ಪಶ್ಚಿಮ ದಿಕ್ಕಿಗೆ ಹಾದು ಹೋಗುತ್ತದೆ ಎಂದರೆ ಸರಿ.

ಸದರಿ ಜಾಗದ ವಿಚಾರವಾಗಿ ನಾವು ಯಾವುದೇ ಪಂಚಾಯಿತಿ ಮಾಡಿರುವುದಿಲ್ಲ. ನಾನು ದೂರು ನೀಡಿದಾಗ ಸಮಯ ರಾತ್ರಿ 9.00 ರಿಂದ 10.00 ಗಂಟೆ ಆಗಿತ್ತು. ನಿಪಿ-1 ನ್ನು ಯಾರು ಬರೆದರು ಎಂದು ನನಗೆ ಗೊತ್ತಿಲ್ಲ. ನಿಪಿ-1 ರಲ್ಲಿರುವ ವಿಚಾರಗಳು ನನಗೆ ಗೊತ್ತಿಲ್ಲ.

1 ನೇ ಆರೋಪಿ ನನಗೆ ಹಾರೆಕೋಲಿನಿಂದ ನನ್ನ ತಲೆಗೆ ಹೊಡೆದನು. 8 ನೇ ಆರೋಪಿ ಕೈ ಕಾಲುಗಳಿಂದ ನನ್ನ ಬೆನ್ನಿಗೆ ಹೊಡೆದನು. 3 ನೇ ಆರೋಪಿ ನಮಗೆ ಹೊಡೆದಿರುವುದಿಲ್ಲ. 5 ನೇ ಆರೋಪಿ ನನಗೆ ಮತ್ತು ಚಾಸಾ-4 ರವರಿಗೆ ಕೈ ಕಾಲುಗಳಿಂದ ನಮ್ಮ ಕೈ ಕಾಲುಗಳಿಗೆ ಹೊಡೆದರು. 6 ಮತ್ತು 7 ನೇ ಆರೋಪಿತರು ನಮಗೆ ಹೊಡೆದಿರುವುದಿಲ್ಲ. ನಿಪಿ-1 ರಲ್ಲಿ ನಾನು ಆರೋಪಿತರು ದೊಣ್ಣೆ ಮತ್ತು ಕಲ್ಲುಗಳಿಂದ ಹೊಡೆದರು ಎಂದು ಹೇಳಿಕೆ ನೀಡಿರುವುದಿಲ್ಲ. ಚಿತ್ರದುರ್ಗ ಜಿಲ್ಲಾ ಆಸ್ಪತ್ರೆಗೆ ಕಾರ್ ನಲ್ಲಿ ಹೋಗಿರುತ್ತೇವೆ. ನಮ್ಮ ಊರಿನಿಂದ ಹಿರಿಯೂರು 20 ಕಿ ಮೀ ದೂರ ಇದೆ. ನಮ್ಮ ಊರಿನಿಂದ ಚಿತ್ರದುರ್ಗ 30-40 ಕಿ ಮೀ ದೂರ ಇದೆ. ಈ ಗಲಾಟೆ ಜಾಗದ ವಿಚಾರವಾಗಿ ನಡೆದಿರುತ್ತದೆ. ಗಲಾಟೆ

ನಡೆದ ಸಮಯದಲ್ಲಿ ನಮ್ಮ ಮನೆಯಲ್ಲಿ 4 ಜನ ಇದ್ದೆವು. ಗಲಾಟೆ ಸುಮಾರು ಅರ್ಧ ಗಂಟೆ ನಡೆದಿರುತ್ತದೆ. ಗಲಾಟೆ ನಡೆದ ಸಮಯದಲ್ಲಿ ನಮ್ಮನ್ನು ಹಾಗೂ ಆರೋಪಿತರನ್ನು ಹೊರತು ಪಡಿಸಿ ಬೇರೆ ಯಾರೂ ಇರಲಿಲ್ಲ. ಶಿವಗಂಗಾ ಗ್ರಾಮದಲ್ಲಿ ಸುಮಾರು 45 ಮನೆಗಳು ಇವೆ. ನಾವು ಹಿರಿಯೂರು ಸರ್ಕಾರಿ ಆಸ್ಪತ್ರೆ ಗೆ ಅಲ್ಲಿ ಆಗುವುದಿಲ್ಲ ಎಂದು ತಿಳಿಸಿದ ಮೇರೆಗೆ ಚಿತ್ರದುರ್ಗ ಜಿಲ್ಲಾ ಆಸ್ಪತ್ರೆಯಲ್ಲಿ ಒಳ ರೋಗಿಯಾಗಿ ಚಿಕಿತ್ಸೆ ಪಡೆದಿರುತ್ತೇನೆ. ಆಸ್ಪತ್ರೆಯಲ್ಲಿ X-ray ಮಾಡಿರುತ್ತಾರೆ. ನಾನು ದೂರು ನೀಡಿದ ನಂತರ ಪೋಲಿಸ್ ಠಾಣೆಗೆ ಹೋಗಿರುವುದಿಲ್ಲ.

ನಾನು, ಚಾಸಾ-2 ರಿಂದ 8 ರವರು ಆರೋಪಿತರ ಮೇಲೆ ಪದೇ ಪದೇ ಜಗಳ ಮಾಡುತ್ತಿದ್ದೆವು ಎಂದರೆ ಸರಿಯಲ್ಲ. ನಾನೇ ಬಿದ್ದು ಗಾಯಗೊಂಡಿದ್ದೇನೆ ಎಂದರೆ ಸರಿಯಲ್ಲ. ಸಾಮಾನ್ಯವಾಗಿ ರೈತರ ಮನೆಗಳಲ್ಲಿ ಹಾರೆಕೋಲು ಇರುತ್ತದೆ ಎಂದರೆ ಸರಿ. ಆರೋಪಿತರು ನಮಗೆ ಬೈದಿಲ್ಲ, ಅಕ್ರಮವಾಗಿ ಗುಂಪುಕಟ್ಟಿಕೊಂಡು ಬಂದು 1 ನೇ ಆರೋಪಿ ಹಾರೇಕೋಲಿನಿಂದ ಹಲ್ಲೆ ಮಾಡಿಲ್ಲ ಎಂದರೆ ಸರಿಯಲ್ಲ. ಚಾಸಾ-2 ರವರಿಗೆ 1 ಆರೋಪಿ ಸೀರೆ ಹಿಡಿದು ಎಳೆದಾಡಿಲ್ಲ ಎಂದರೆ ಸರಿಯಲ್ಲ. ಆರೋಪಿತರು ನಮಗೆ ಪ್ರಾಣ ಬೆದರಿಕೆ ಹಾಕಿಲ್ಲ ಎಂದರೆ ಸರಿಯಲ್ಲ. 1 ನೇ ಆರೋಪಿಯ ಮನೆಯ ಜಾಗವನ್ನು ಲಪಟಾಯಿಸುವ ಉದ್ದೇಶದಿಂದ, ನಾನು ಮತ್ತು ಚಾಸಾ-2 ರಿಂದ 8 ರವರೊಂದಿಗೆ ಸೇರಿ ಸುಳ್ಳು ದೂರು ನೀಡಿದ್ದೇವೆ ಎಂದರೆ ಸರಿಯಲ್ಲ. ನಾನು, ಚಾಸಾ-2 ರಿಂದ 8 ರವರು ಸಂಬಂಧಿಕರಾಗಿದ್ದು, ಆರೋಪಿತರ ವಿರುದ್ದ ಪಿತೂರಿ ಮಾಡಿ, ಸುಳ್ಳು ದೂರು ನೀಡಿ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಮುಕ್ತ ಹೇಳಿಕೆ ಮತ್ತು ನನ್ನ ಉಕ್ತಲೇಖನಕ್ಕೆ ತಕ್ಕಂತೆ ಬೆರಳಚ್ಚು ಮಾಡಿಸಲಾಯಿತು).

ಓ ಹೇ ಕೇ ಸರಿ ಇದೆ

ಅಪರ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ., ಹಿರಿಯೂರು.